## 28. ಅಂಡಮಾನ್–ನಿಕೋಬಾರ್‌ಗೆ ಮೊದಲ ಬಾರಿಗೆ ಮರೈನ್ ಆಪ್ಟಿಕಲ್ ಫೈಬರ್ ಯೋಜನೆ

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಮೊದಲ ಸಾಗರದೊಳಗಿನ ಆಪ್ಟಿಕಲ್ ಫೈಬರ್ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಇದು ದ್ವೀಪ ರಾಷ್ಟ್ರದ ಬಹುಭಾಗಕ್ಕೆ ವೇಗದ ಇಂಟರ್‌ನೆಟ್ (ಬ್ರಾಡ್ ಬ್ಯಾಂಡ್) ಸಂಪರ್ಕವನ್ನು ಒದಗಿಸುತ್ತದೆ. ಚೆನ್ನೈ – ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಸಂಪರ್ಕಿಸುವ 2,312 ಕಿಲೋಮೀಟರ್ ಉದ್ದದ ಜಲಾಂತರ್‌ಗಾಮಿ ಆಪ್ಟಿಕಲ್ ಫೈಬರ್ ಕೇಬಲ್ ಯೋಜನೆಗೆ 2018ರ ಡಿಸೆಂಬರ್ 30 ರಂದು ಪ್ರಧಾನಿ ಅಡಿಪಾಯ ಹಾಕಿರುತ್ತಾರೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ಯೋಜನೆಯನ್ನು ಉದ್ಘಾಟಿಸಿದ ಮೋದಿ ಚೆನ್ನೈನಿಂದ ಪೋರ್ಟ್ ಬ್ಲೇರ್, ಪೋರ್ಟ್ ಬ್ಲೇರ್‌ನಿಂದ ಲಿಟಲ್ ಅಂಡಮಾನ ಮತ್ತು ಪೋರ್ಟ್ ಬ್ಲೇರ್‌ನಿಂದ ಸ್ವರಾಜ್ ದ್ವೀಪ್‌ವರೆಗೆ ಇದೆ. ಅಂಡಮಾನ್ ನಿಕೋಬಾರ್‌ನ ಬಹುಭಾಗದಲ್ಲಿ ವೇಗದ ಇಂಟರ್‌ನೆಟ್ ಸೇವೆಯು ಇಂದಿನಿಂದ ಪ್ರಾರಂಭವಾಗಿದೆ ಎಂದು ಹೇಳಿದರು.

ರೂ.1,224 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಪೋರ್ಟ್‌ಬ್ಲೇರ್ ಜೊತೆಗೆ ಸ್ವರಾಜ್ ದ್ವೀಪ್ (ಹ್ಯಾವ್ ಲಾಕ್), ಲಾಂಗ್ ಐಲ್ಯಾಂಡ್, ರಂಗತ್, ಲಿಟಲ್ ಅಂಡಮಾನ್, ಕಮೋರ್ಟಾ, ಕಾರ್ ನಿಕೋಬಾರ್ ಮತ್ತು ಗ್ರೇಟರ್ ನಿಕೋಬಾರ್ ದ್ವೀಪಗಳನ್ನು ಸಂಪರ್ಕಿಸುತ್ತದೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಜನರಿಗೆ ಆಧುನಿಕ ಟೆಲಿಕಾಂ ಸಂಪರ್ಕವನ್ನು ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ದೇಶದ ಎಲ್ಲ ಟೆಲಿಕಾಂ ಆಪರೇಟರ್‌ಗಳು ತಮ್ಮ ಮೊಬೈಲ್ ಮತ್ತು ಬ್ರಾಡ್ ಬ್ಯಾಂಡ್ ಸೇವೆಗಳನ್ನು ಆಪ್ಟಿಕಲ್ ಫೈಬರ್ ಲಿಂಗ್ ಬಳಸಿ ಒದಗಿಸಲು ಸಾಧ್ಯವಾಗುತ್ತದೆ. ಅಂಡಮಾನ್ ಮತ್ತು ನಿಕೋಬಾರ್ ಅನ್ನು ದೇಶದ ಉಳಿದ ಭಾಗಗಳೊಂದಿಗೆ ಸಂಪರ್ಕಿಸುವ ಆಪ್ಟಿಕಲ್ ಫೈಬರ್ ಕನೆಕ್ಟಿವಿಟಿ ಯೋಜನೆಯು ಜೀವನ ಸುಲಭವಾಗಿಸುವ ನಮ್ಮ ಬದ್ಧತೆಯ ಸಂಕೇತವಾಗಿದೆ ಎಂದು ಮೋದಿ ಹೇಳಿದರು.

ಪೋರ್ಟ್ ಬ್ಲೇರ್‌ನಲ್ಲಿ ಸೆಕೆಂಡಿಗೆ 400 ಗಿಗಾಬೈಟ್ (ಜಿಬಿ) ಇಂಟರ್‌ನೆಟ್ ವೇಗವನ್ನು ಒದಗಿಸಲಾಗುವುದು. ಇತರ ದೀಪಗಳಿಗೆ ಇದು ಸೆಕೆಂಡಿಗೆ 200 ಜಿಬಿ ಆಗಿರುತ್ತದೆ. ಅಂಡಮಾನ್ ದ್ವೀಪಗಳನ್ನು ಚೆನ್ನೈಗೆ ಜೋಡಿಸುವ ಸಾಗರದೊಳಗಿನ ಕೇಬಲ್ ಅನ್ನು ಕಷ್ಟಕರ ಪರಿಸ್ಥಿತಿಯ ಹೊರತಾಗಿಯೂ ಸಮಯಕ್ಕೆ ಮುಂಚಿತವಾಗಿ ಹಾಕಲಾಗಿದೆ. ಸಾಗರದೊಳಗಿನ ಕೇಬಲ್ ಹಾಕುವ ಕೆಲಸವನ್ನು ಬಿ.ಎಸ್.ಎನ್.ಎಲ್. 24 ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಿದೆ. ಈ ಯೋಜನೆಯು 4ಜಿ ಮೊಬೈಲ್ ಸೇವೆಗಳು ಮತ್ತು ಟೆಲಿ ಶಿಕ್ಷಣ,. ಟೆಲಿ–ಹೆಲ್ತ್, ಇ–ಆಡಳಿತ ಸೇವೆಗಳು ಮತ್ತು ದ್ವೀಪಗಳಲ್ಲಿನ ಪ್ರವಾಸೋದ್ಯಮದಂತಹ ಡಿಜಿಟಲ್ ಸೇವೆಗಳಿಗೆ ಉತ್ತೇಜನ ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

- ಅಂಡಮಾನ್ ಮತ್ತು ನಿಕೋಬಾರ್‌ನ 12 ದ್ವೀಪಗಳಲ್ಲಿ ಯೋಜನೆಗಳ ವಿಸ್ತರಣೆ
- ಮೊಬೈಲ್, ಇಂಟರ್‌ನೆಟ್ ಸಂಪರ್ಕದ ಸಮಸ್ಯೆಯನ್ನು ಇಂದು ಪರಿಹರಿಸಲಾಗಿದೆ.
- ರಸ್ತೆ, ಗಾಳಿ ಮತ್ತು ನೀರಿನ ಮೂಲಕ ಭೌತಿಕ ಸಂಪರ್ಕವನ್ನು ಬಲಪಡಿಸಲಾಗುತ್ತಿದೆ.
- ಉತ್ತರ – ಮಧ್ಯ ಅಂಡಮಾನ್‌ನ ರಸ್ತೆ ಸಂಪರ್ಕಕ್ಕೆ 2 ಸೇತುವೆ, ಎನ್‌ಎಚ್–4 ಕೆಲಸ ಆರಂಭ.
- ನಮ್ಮ ಜಲ ಮಾರ್ಗಗಳ ಜಾಲ ಮತ್ತು ಬಂದರುಗಳನ್ನು ಬಲಪಡಿಸುವುದು ಬಹಳ ಮುಖ್ಯ.
- ದ್ವೀಪದಲ್ಲಿ ಮೀನುಗಾರಿಕೆ, ಜಲಚರ ಸಾಕಣೆ, ಕಡಲಕಳೆ ಕೃಷಿಯಿಂದ ಆರ್ಥಿಕತೆಗೆ ವೇಗ.

**ವಿಮಾನ ನಿಲ್ದಾಣ ಮೇಲ್ದರ್ಜೆಗೆ:–** 1,200 ಪ್ರಯಾಣಿಕರ ಸಾಮರ್ಥ್ಯವನ್ನು ನಿಭಾಯಿಸಲು ಪೋರ್ಟ್ ಬ್ಲೇರ್ ವಿಮಾನ ನಿಲ್ದಾಣವನ್ನು ವಿಸ್ತರಿಸಲಾಗುತ್ತಿದೆ. ಡಿಗ್ಲಿಪುರ, ಕಾರ್, ನಿಕೋಬಾರ್ ಮತ್ತು ಕ್ಯಾಂಪ್ಬೆಲ್ – ಬೇಗಳಲ್ಲಿ ವಿಮಾನ ನಿಲ್ದಾಣಗಳು ಕಾರ್ಯಾಚರಣೆಗೆ ಸಿದ್ಧವಾಗಿವೆ. ಅದೇ ರೀತಿ ಪೂರ್ವ ಕರಾವಳಿಯಲ್ಲಿ ಡೀಪ್ ಡ್ರಾಫ್ಟ್ ಒಳ ಬಂದರಿನ ನಿರ್ಮಾಣವೂ ವೇಗವಾಗಿ ನಡೆಯುತ್ತಿದೆ. ಈಗ ಗ್ರೇಟ್ ನಿಕೋಬಾರ್‌ನಲ್ಲಿ ರೂ.10,000 ಕೋಟಿ ಅಂದಾಜು ವೆಚ್ಚದಲ್ಲಿ ಟ್ರಾನ್ಸ್‌ಶಿಪ್‌ಮೆಂಟ್ ಬಂದರು ನಿರ್ಮಾಣದ ಪ್ರಸ್ತಾಪವಿದೆ. ಹೊಸ ಬಂದರು ನಿರ್ಮಾಣದ

ಹಾಗೂ ಹೊಸ ಬಂದರು ದೊಡ್ಡ ಹಡಗುಗಳನ್ನು ಲಂಗರು ಹಾಕಲು ಮತ್ತು ಕಡಲ ವ್ಯಾಪಾರದಲ್ಲಿ ಭಾರತದ ಪಾಲನ್ನು ಹೆಚ್ಚಿಸಲು ಹೊಸ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.

ಆಧಾರ:ಪ್ರಜಾವಾಣಿ, ದಿನಾಂಕ:11.08.2020